CAREERINDIA

No. of Printed Pages : 7

**6804**

*Register Number* | | | | | | | |

# Language — Part I — KANNADA — Paper I

(Poetry and Prose)

Time Allowed : 2½ Hours ]  [ Maximum Marks : 100

**ಸೂಚನೆಗಳು :** (1) ಪ್ರಶ್ನೆಪತ್ರಿಕೆ ಮುದ್ರಣ ಸ್ವಚ್ಛವಾಗಿದೆಯೇ ಎಂದು ಖಾತರಿಪಡಿಸಿಕೊಳ್ಳಿ. ಸ್ವಚ್ಛತೆಯಲ್ಲಿ ಏನಾದರೂ ಕೊರತೆ ಇದ್ದಲ್ಲಿ ತಕ್ಷಣವೇ ಕೊಠಡಿ ಮೇಲ್ವಿಚಾರಕರಿಗೆ ತಿಳಿಸಿ.

(2) ಬರೆಯಲು ಮತ್ತು ಅಡ್ಡಗೆರೆ ಎಳೆಯಲು ನೀಲಿ ಅಥವಾ ಕಪ್ಪು ಶಾಹಿಯನ್ನು ಬಳಸಿರಿ ಹಾಗೂ ಆಕೃತಿಗಳನ್ನು ರಚಿಸಲು ಪೆನ್ಸಿಲ್ ಬಳಸಿರಿ.

**ಸೂಚನೆ :** ಉತ್ತರಗಳು ಸ್ಪಷ್ಟವಾಗಿದ್ದು, ಕೊಟ್ಟಿರುವ ಸಾಲುಗಳ ಮಿತಿ ಮೀರದಂತಿರಲಿ.

## ಭಾಗ – ಅ

## PART - A

I. (a) ಈ ಕೆಳಗಿನ ಪ್ರಶ್ನೆಗಳಿಗೆ **ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ. **20x1=20**

Choose and write the **correct** answer for the following questions.

**1.** ಬಸವಣ್ಣನವರ ವಚನಗಳ ಅಂಕಿತ :

(ಅ) ಗುಹೇಶ್ವರ (ಆ) ರಾಮನಾಥ

(ಇ) ಚೆನ್ನಮಲ್ಲಿಕಾರ್ಜುನ (ಈ) ಕೂಡಲ ಸಂಗಮದೇವ

**2.** "ಕುಲಂ ಕುಲಮಲ್ತು ಚಲಂ ಕುಲಂ" ಈ ಮಾತನ್ನು ಹೇಳಿದವರು __________ .

(ಅ) ದ್ರೋಣ (ಆ) ಕರ್ಣ

(ಇ) ಕೃಷ್ಣ (ಈ) ಭೀಷ್ಮ

**3.** ಭೀಮನಿಂದ ಹತನಾದ ರಾಕ್ಷಸನು ಯಾರು ?

(ಅ) ಕಂಸಾಸುರ (ಆ) ರಾವಣಾಸುರ

(ಇ) ಬಕಾಸುರ (ಈ) ನರಕಾಸುರ

[ Turn over

www.careerindia.com

CAREERINDIA



(b) ಬಿಟ್ಟ ಸ್ಥಳಗಳಲ್ಲಿ **ಸರಿಯಾದ** ಪದಗಳನ್ನು ತುಂಬಿರಿ.

Fill in the blanks using the **correct** words.

**4.** ಎಲುವಿಲ್ಲ ನಾಲಗೆಗೆ __________ ಬಡವಂಗೆ.

**5.** ಉಳ್ಳವರು __________ ಮಾಡುವರು.

**6.** ಕನ್ನಡದ ಜನಕುಲವು __________ ಬಲವು.

(c) ಹೊಂದಿಸಿ ಬರೆಯಿರಿ :

Match the following :

**7.** ಶರಣರ ವಚನಗಳು – ಎಂ. ಗೋವಿಂದ ಪೈ

**8.** ಬಕಾಸುರ ವಧೆ – ಬೆನಗಲ್ ರಾಮರಾವ್

**9.** ಗೊಲ್ಗೋಥಾ – ಬಸವಣ್ಣ, ಅಕ್ಕಮಹಾದೇವಿ

**10.** ಕನ್ನಡಾಂಬೆಯ ಹಿರಿಮೆ – ಕುಮಾರವ್ಯಾಸ

(d) ಈ ಹೇಳಿಕೆಗಳು **ಸರಿ/ತಪ್ಪು** ತಿಳಿಸಿರಿ.

Say whether the statements are **True** or **False**.

**11.** 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂದು ಖ್ಯಾತನಾದವನು ಕುಮಾರವ್ಯಾಸ.

**12.** ಕನ್ನಡ ಸಂಧಿಗಳಲ್ಲಿ ನಾಲ್ಕು ವಿಧಗಳಿವೆ.

www.careerindia.com

CAREERINDIA



(e) ಬಿಟ್ಟ ಸ್ಥಳ ತುಂಬಿರಿ.

Fill in the blanks.

13. ಚಿಪ್ಕೋ ಚಳುವಳಿಯು ಆರಂಭವಾದ ವರ್ಷ __________.

14. ಆರ್ಕಿಮಿಡೀಸನು __________ ರಾಜನ ಅನುಗ್ರಹಕ್ಕೆ ಪಾತ್ರನಾದನು.

(f) **ಸರಿಯಾದ** ಉತ್ತರವನ್ನು ಆರಿಸಿ ಬರೆಯಿರಿ.

Choose the **correct** answer.

15. ವೈದ್ಯರ ಪತ್ನಿಯ ಹೆಸರು __________.

(ಅ) ಶಾಂತ (ಆ) ರಮ್ಯ

(ಇ) ರಮ (ಈ) ಉಮಾ

16. ನೇಮಿಚಂದ್ರ ಯಾವ ಶತಮಾನಕ್ಕೆ ಸೇರಿದವನು ?

(ಅ) ಹನ್ನೆರಡನೇ (ಆ) ಹದಿನಾರನೇ

(ಇ) ಹತ್ತನೇ (ಈ) ಹದಿನಾಲ್ಕನೇ

(g) ಹೊಂದಿಸಿ ಬರೆಯಿರಿ :

Match the following :

17. ಪಂಡಿತ ಭೀಮಸೇನ ಜೋಷಿ – ಜನಪದ ಕತೆ

18. ಪದ್ಯಂ ವದ್ಯಂ ಗದ್ಯಂ ಹೃದ್ಯಂ – ಅ.ರಾ. ಮಿತ್ರ

19. ಮೂರು ಗಂಟೆಗಳು – ಮುದ್ದಣ್ಣ

20. ತಬ್ಬಲಿರಾಯ – ಎಚ್.ಎಸ್.ಕೆ.

www.careerindia.com

CAREERINDIA



## ಭಾಗ – ಆ
## PART - B

II. (a) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ಐದು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಮೂರು** ಸಾಲುಗಳು **ಮೀರದಂತೆ** ಉತ್ತರಿಸಿರಿ. **5x2=10**

Answer **any five** of the following questions, answer should **not exceed three** lines each.

**21.** ಕರ್ಣನು ಏನೆಂದು ಪ್ರತಿಜ್ಞೆ ಮಾಡುತ್ತಾನೆ ?

**22.** 'ನಿಧಾನವ ಕಾಯ್ದಿರ್ದ ಬೆಂತರನಂತೆ' ಈ ಮಾತಿನ ಅರ್ಥವೇನು ?

**23.** ಸ್ವರ್ಗದಲ್ಲಿ ಯಾವುದು ಇರುವುದಿಲ್ಲ ?

**24.** ಕವಿಗೆ ಯಾವುದು ಉಸಿರು ? ಯಾವುದು ತಾಯಿ ?

**25.** ಬಕಾಸುರನ ಹೆಣವನ್ನು ಭೀಮನು ಏನು ಮಾಡಿದನು ?

**26.** ವಿದ್ಯೆಯಿಲ್ಲದವನ ಮುಖವು ಹೇಗಿರುತ್ತದೆ ?

**27.** ಕವಿಗೆ ಹುಲಿಯನ್ನು ಪ್ರೀತಿಸಲು ಸಾಧ್ಯವಾಗುತ್ತಿಲ್ಲವೇಕೆ ?

(b) ಕೆಳಗಿನ **ಯಾವುದಾದರೂ ಐದು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಮೂರು** ಸಾಲುಗಳು **ಮೀರದಂತೆ** ಉತ್ತರಿಸಿರಿ.

Answer **any five** of the following questions, answer should **not exceed three** lines each. **5x2=10**

**28.** ಕೃಷ್ಣಪಕ್ಷದ ಚತುರ್ದಶಿಯ ರಾತ್ರಿಯ ವಾತಾವರಣ ಹೇಗಿದ್ದಿತು ?

**29.** ರೇನಿ ಎಂಬಲ್ಲಿ ಮರ ಕಡಿಯುವುದನ್ನು ವಿರೋಧಿಸಿದ ಮಹಿಳೆ ಯಾರು ?

**30.** 'ಮಿಯಾ ಮಲ್ಹಾರ' ಎಂದರೇನು ?

**31.** ಮನೋರಮೆಯು ಮುದ್ದಣ್ಣನನ್ನು ಹೇಗೆ ಉಪಚರಿಸಿದಳು ?

**32.** ಆರ್ಕಿಮಿಡೀಸನು ಗಣಿತಶಾಸ್ತ್ರವನ್ನು ಎಲ್ಲಿ ಕಲಿತನು ?

**33.** ತ.ಸು. ವೆಂಕಣ್ಣಯ್ಯ ಕೋಪ ಬಂದರೆ ಏನು ಮಾಡುತ್ತಿದ್ದರು ?

**34.** ಗುರುತಾಯಮ್ಮನು ಏನೇನು ಅಪಶಕುನಗಳನ್ನು ಕಂಡಳು ?

www.careerindia.com

CAREERINDIA



(c) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಆರು** ಸಾಲುಗಳು **ಮೀರದಂತೆ** ಉತ್ತರಿಸಿರಿ. **3x4=12**

Answer **any three** questions from the following, answer should **not exceed six** lines each.

35. ಯೇಸು ಮರಣ ಹೊಂದಿದ ಸನ್ನಿವೇಶವನ್ನು ಬಣ್ಣಿಸಿ.

36. ಹೊತ್ತಾದಂತೆಲ್ಲಾ ವಿದ್ಯಾರ್ಥಿಗಳ ಬರವಣಿಗೆಯ ವೇಗ ಹೇಗಿರುತ್ತದೆ ? ವಿವರಿಸಿ.

37. ಭೀಮನಿಗೂ ಬಕಾಸುರನಿಗೂ ನಡೆದ ಹೋರಾಟವನ್ನು ವರ್ಣಿಸಿರಿ.

38. ಅಲಕಾನಂದ ಕಣಿವೆಯಲ್ಲಿ ಜನರು ಎದುರಿಸುತ್ತಿದ್ದ ಸಮಸ್ಯೆಗಳು ಯಾವುವು ?

39. ನಿನ್ನೆದೆಯ ದನಿಯೆ ಋಷಿ, ಮನು ನಿನಗೆ ನೀನು ಎಂಬುದರ ಭಾವಾರ್ಥವೇನು ?

(d) 40. ಕೊಟ್ಟಿರುವ ಪದ್ಯವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸಿರಿ. **5x1=5**

Read the given poem and answer the questions.

ಎಲುವಿಲ್ಲ ನಾಲಗೆಗೆ, ಬಲವಿಲ್ಲ ಬಡವಂಗೆ
ತೊಲೆಗಂಬವಿಲ್ಲ ಗಗನಕ್ಕೆ ದೇವರಲಿ
ಕುಲಭೇದವಿಲ್ಲ ಸರ್ವಜ್ಞ

**ಪ್ರಶ್ನೆಗಳು :**

(ಅ) ಈ ಪದ್ಯವು ಯಾವ ಜಾತಿಗೆ ಸೇರಿದೆ ?
(ಆ) ಈ ಪದ್ಯದ ರಚನಕಾರರು ಯಾರು ?
(ಇ) ನಾಲಗೆಯಲ್ಲಿ ಯಾವುದು ಇರುವುದಿಲ್ಲ ?
(ಈ) ಯಾರಿಗೆ ಬಲವಿರುವುದಿಲ್ಲ ?
(ಉ) ಯಾರಲ್ಲಿ ಕುಲಭೇದವಿರುವುದಿಲ್ಲ ?

(e) ಕೆಳಗಿನ ಪ್ರಶ್ನೆಗಳಲ್ಲಿ **ಯಾವುದಾದರೂ ಮೂರು** ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ **ಆರು** ಸಾಲುಗಳು **ಮೀರದಂತೆ** ಉತ್ತರಿಸಿರಿ. **3x4=12**

Answer **any three** of the following questions. Answer should **not exceed six** lines each.

41. ಶಕುಂತಲೆಯನ್ನು ಗಂಡನ ಮನೆಗೆ ಕಳುಹಿಸುವಾಗ ಕಣ್ವ ಋಷಿಗಳಿಗಾದ ಕಳವಳವನ್ನು ಚಿತ್ರಿಸಿ.

42. ಬಸವಣ್ಣನವರ ದೃಷ್ಟಿಯಲ್ಲಿ ಶಿವಾಲಯ ಯಾವುದು ? ವಿವರಿಸಿ.

43. ಜೋಷಿಯವರ ಸಂಗೀತ ಮಾಧುರ್ಯವನ್ನು ಬಣ್ಣಿಸಿ.

44. ಅತ್ತಿಗೆಯರು ಸೂರ್ಯನಾರಾಯಣನನ್ನು ಕೊಲ್ಲಲು ಯಾವ ಉಪಾಯ ಹೂಡಿದರು ?

45. ಆರ್ಕಿಮಿಡೀಸನು ಯಂತ್ರಗಳಿಂದ ಶತ್ರು ಸೈನ್ಯವನ್ನು ಸದೆಬಡಿದ ಬಗೆ ಹೇಗೆ ?

[ Turn over

www.careerindia.com

CAREERINDIA



## ಭಾಗ – ಇ

## PART - C

III. 46. (a) ಈ ಗದ್ಯಭಾಗವನ್ನು ಓದಿ ಮೂರನೆಯ ಒಂದು ಭಾಗಕ್ಕೆ ಸಂಕ್ಷಿಪ್ತವಾಗಿ ಬರೆಯಿರಿ. 1x5=5

Read the following passage and write precis of the same.

ಆರ್ಕಿಮಿಡೀಸನು ಕ್ರಿ.ಪೂ. 287 ರಲ್ಲಿ ಸಿಸಿಲಿಗೆ ಸೇರಿದ ಸಿರಾಕ್ಯೂಸ್ ನಗರದಲ್ಲಿ ಜನಿಸಿದನು. ಬಾಲ್ಯದಲ್ಲಿಯೇ ಅವನು ಈಜಿಪ್ಟಿಗೆ ಹೋಗಿ ಅಲ್ಲಿ ಅಲೆಗ್ಸಾಂಡ್ರಿಯಾ ಪಟ್ಟಣದಲ್ಲಿ ಗ್ರೀಕರ ಪ್ರಸಿದ್ಧ ವಿಶ್ವವಿದ್ಯಾನಿಲಯದಲ್ಲಿ ಗಣಿತಶಾಸ್ತ್ರವನ್ನು ಕಲಿತನು. ಅವನಿಗೆ ಮೊದಲಿನಿಂದಲೂ ಸರ್ವಜನೋಪಯುಕ್ತವಾದ ಯಂತ್ರಗಳನ್ನು ನಿರ್ಮಿಸಬೇಕೆಂಬ ಆಸೆಯಿದ್ದಿತು. ಪರೋಪಕಾರವೇ ಅವನ ಧ್ಯೇಯ. ಅವನು ಈಜಿಪ್ಟಿನಲ್ಲಿರುವಾಗ ಅಲ್ಲಿ ನೆಲದಲ್ಲಿ ನೀರು ನಿಂತು ಜೌಗಾಗಿ ವ್ಯವಸಾಯಕ್ಕೆ ಬಹಳ ತೊಂದರೆಯಾಗಿದ್ದಿತು. ಆರ್ಕಿಮಿಡೀಸನು ತನ್ನ ಚಾತುರ್ಯದಿಂದ ನಿಂತ ನೀರನ್ನು ತೆಗೆದು ಬೇರೆ ಕಡೆಗೆ ಹಾಯಿಸಲು ಅನುಕೂಲವಾದ ನೀರು ತಿರುಪು ಎಂಬ ಯಂತ್ರವನ್ನು ನಿರ್ಮಿಸಿದನು. ವಿದ್ಯಾರ್ಜನೆಯು ಮುಗಿದೊಡನೆ ಸ್ವದೇಶ ಪ್ರೇಮದಿಂದ ಆರ್ಕಿಮಿಡೀಸನು ಸಿರಾಕ್ಯೂಸ್‌ಗೆ ಬಂದು ನಿಂತನು. ಆ ಕಾಲದಲ್ಲಿ ಅಲ್ಲಿ ಹೀರೋ ಎಂಬ ರಾಜನು ಆಳುತ್ತಿದ್ದನು. ಆರ್ಕಿಮಿಡೀಸನ ಬುದ್ಧಿ ಪ್ರಭಾವವು ಪ್ರಕಾಶಕ್ಕೆ ಬಂದು ಅವನು ರಾಜನ ಅನುಗ್ರಹಕ್ಕೆ ಪಾತ್ರನಾದನು.

**ಅಥವಾ**

ಈ ಗದ್ಯಭಾಗವನ್ನು ಓದಿ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ.

Read this passage and answer the following questions.

ಕನ್ನಡದ ಸಂತ ಸರ್ವಜ್ಞರಂತೆಯೇ ತಮಿಳು ಸಂತ ತಿರುವಳ್ಳುವರ್ ಅವರೂ ಲೋಕಮಾನ್ಯರು. ಇವರು ರಚಿಸಿರುವ 'ತಿರುಕ್ಕುರಳ್' ಅನ್ನು ತಮಿಳುನಾಡಿನ ಜನರು 'ತಮಿಳು ವೇದ' ಎಂದು ಗೌರವಿಸುತ್ತಾರೆ. ಈ ಕೃತಿಯಲ್ಲಿ ಧರ್ಮ (ಅರಂ) ಅರ್ಥ (ಪೊರುಳ್) ಮತ್ತು ಕಾಮ (ಇನ್ಬಂ) ಗಳೆಂಬ ಮೂರು ಪುರುಷಾರ್ಥಗಳನ್ನು ಕುರಿತು ಹೇಳಿದ್ದಾರೆ. ಆದ್ದರಿಂದ ಈ ಕೃತಿಯನ್ನು 'ಮುಪ್ಪಾಲ್' ಎಂದು ಕರೆಯಲಾಗಿದೆ. ಮಾನವನು ಧರ್ಮ ಅರ್ಥ ಮತ್ತು ಕಾಮಗಳೆಂಬ ಮೂರು ಮೆಟ್ಟಿಲುಗಳನ್ನು ಏರಿದರೆ ಮೋಕ್ಷವು ತನಗೆ ತಾನಾಗಿಯೇ ಲಭಿಸುತ್ತದೆ ಎಂಬುದು ತಿರುವಳ್ಳುವರರ ಅಭಿಮತ.

'ಕುರುಳ್‌ವೆಣ್ಬಾ' ಎರಡು ಪಾದಗಳ ಛಂದಸ್ಸಿನಲ್ಲಿರುವ ತಿರುಕ್ಕುರಳ್‌ನಲ್ಲಿ 1330 ಸೂತ್ರಗಳಿವೆ. ಈ ಕೃತಿಯಲ್ಲಿ ಅಂಗೈಯಲ್ಲಿ ಆನೆಯನ್ನು ಅಡಗಿಸಿದಂತೆ ಲೋಕ ನೀತಿಯನ್ನು ಲೋಕ ಜೀವನವನ್ನು ಅಡಗಿಸಿದ್ದಾರೆ.

**ಪ್ರಶ್ನೆಗಳು :**

(ಅ) ತಮಿಳು ವೇದ ಯಾವುದು ?

(ಆ) ತಿರುಕ್ಕುರಳ್‌ನಲ್ಲಿ ಏನೇನು ತುಂಬಿದ್ದಾರೆ ?

(ಇ) ಮೂರು ಪುರುಷಾರ್ಥಗಳು ಯಾವುವು ?

(ಈ) ವೆಣ್ಬಾ ಛಂದಸ್ಸಿನಲ್ಲಿ ಎಷ್ಟು ಪಾದಗಳಿವೆ ?

(ಉ) ತಿರುಕ್ಕುರಳ್‌ನಲ್ಲಿನ ಸೂತ್ರಗಳ ಸಂಖ್ಯೆ ಎಷ್ಟು ?

www.careerindia.com

CAREERINDIA



(b) ಈ ಕೆಳಗಿನ ಪ್ರಶ್ನೆಗೆ **ಹತ್ತು** ಸಾಲುಗಳು **ಮೀರದಂತೆ** ಉತ್ತರಿಸಿರಿ. **1x8=8**

Answer the following question, answer should **not exceed ten** lines.

**47.** ಅಧ್ಯಾಪಕರಿಗೆ ಮಾತು ಉಸಿರಿನಂತೆಯೇ ಸಹಜವಾದ ಕ್ರಿಯೆ – ಸಮರ್ಥಿಸಿ.

**ಅಥವಾ**

ವಿದ್ಯೆಯ ಮಹತ್ವವನ್ನು ಸರ್ವಜ್ಞ ಹೇಗೆ ಬಣ್ಣಿಸಿದ್ದಾನೆ ವಿವರಿಸಿ.

(c) ಈ ಕೆಳಗಿನ ಪ್ರಶ್ನೆಗೆ **ಹತ್ತು** ಸಾಲುಗಳು **ಮೀರದಂತೆ** ಉತ್ತರಿಸಿರಿ. **1x8=8**

Answer the following question, answer should **not exceed ten** lines.

**48.** ನಾನೂ ಪ್ರೀತಿಸುತ್ತೇನೆ ಕವನದ ಸಾರಾಂಶವನ್ನು ಬರೆಯಿರಿ.

**ಅಥವಾ**

ಚಿಪ್ಕೋ ಚಳುವಳಿಯ ಪರಿಣಾಮಗಳನ್ನು ವಿವರಿಸಿರಿ.

(d) ಈ ಪದ್ಯಭಾಗಗಳನ್ನು ಪೂರ್ತಿಗೊಳಿಸಿ. **2x5=10**

Complete the following parts of the poem.

**49.** ಎನಿಸು ಕಾಲ . . . . . . . . . . . . .

. . . . . . . . . . . . . . . . . . . .

. . . . . . . . . . . . . . . . . . . .

. . . . . . . . . . . . . . . . . . . .

. . . . . . . . . . ಕೂಡಲ ಸಂಗಮದೇವಾ.

**50.** ಕನ್ನಡದ ಹೊಲ ಮಣ್ಣು . . . . . .

. . . . . . . . . . . . . . . . . .

. . . . . . . . . . . . . . . . . .

. . . . . . . . . . . ಚೆಲುವಿಗದೆ ಸಾಕ್ಷಿ.

- o O o -

www.careerindia.com

www.careerindia.com